‘ನಾ ಇರತೇನಿ ಅಂತ್ಹೇಳಿ ನೀನು ಚಾದಂಗಡಿಯೊಳಗ ಇರೋದು ಕಡಿಮೆ ಮಾಡಿಯಲ್ಲೋ? ಮತ್ತೆ ಮದುವಿ ಅಡಿಗಿ, ಮುಂಜಿವಿ ಅಡಿಗಿ ಅಂತ ಚಾಲೂ ಮಾಡಿಕೊಂಡಿ.’ ದೇವಣ್ಣನಿಗೆ ಮತ್ತೆ ಅಡುಗೆ ಕೆಲಸದ ಆಮಂತ್ರಣಗಳು ಬರತೊಡಗಿದ್ದವು. ತಮ್ಮ ಚಾದಂಗಡಿಯಲ್ಲಿ ದುಡಿಯುವುದನ್ನು ಅಲ್ಲಿ ಒಂದೆರಡು ದಿನದಲ್ಲಿ ದುಡಿಯಬಹುದೆಂದು ಅವನು ಆಗಾಗ ಅನಿಸುತ್ತಿತ್ತು. ‘ಅನಿವಾರ್ಯ ಆದ್ರ, ಬಾಳ ಚಲೋ ಇದ್ರ ಮಾತ್ರ ಹೋಗಿರತೇನಿಬೇ. ನಿನಗೂ ಗೊತ್ತೈತಲ್ಲ?’ ಊರೂರು ಅಲೆಯುವ ತನ್ನ ಚಾಳಿಯನ್ನು ದೇವಣ್ಣ ಅಷ್ಟು ಸುಲಭವಾಗಿ ಬಿಡುವುದಿಲ್ಲ ಎಂದುಕೊಂಡಳು. ತಾನು ಊರಿಗೆ ಹೋದರೆ ಅನಿವಾರ್ಯವಾಗಿ ಬಿಡುತ್ತಾನೆ! ಆದರೆ ಮತ್ತೂ ಸಂಶಯ. ಈ ಶಿವಣ್ಣ ಒಬ್ಬ ಕೂಡಿದ್ದಾನೆ. ಹೊಟೇಲನ್ನು ಶಿವಣ್ಣನ ಮೇಲೆ ಬಿಟ್ಟು ಹೋಗಲು ಸುರು ಮಾಡಿದ್ದಾನೆ. ನಂಬಿಗಸ್ಥ ಕೆಲಸಗಾರ ಗದಿಗೆಪ್ಪ ಸಹ ಇದ್ದಾನೆ. ದೇವಣ್ಣ ಹೊಂಗಲದ ಹೊಟೇಲಿನಲ್ಲಿ ಕೆಲಸಕ್ಕೆ ಇದ್ದಾಗ ಅಲ್ಲಿಯ ಒಂದಿಬ್ಬರು ತುಂಬ ಹತ್ತಿರವಾಗಿದ್ದರು. ಅವರಲ್ಲೊಬ್ಬ ತಾನೂ ದುಡಿಯಲು ಬರುತ್ತೇನೆಂದು ಒಂದೇ ಸಮನೆ ಗಂಟುಬಿದ್ದ.



‘ನಾ ನೋಡಿಕೊಂಡ ಹೇಳ್ತೇನಿ. ಅಕಸ್ಮಾತ್ ಹೊಟೇಲ್ ನಡೀಯೊ ಹಂಗ ಅನಿಸಿದ್ರ ಹೇಳ್ತೇನಿ. ಬರೂವಂತೆ.’ ಗದಿಗೆಪ್ಪ ಎಂದು ಅವನ ಹೆಸರು. ದೇವಣ್ಣನಂತೆಯೇ ಎಲ್ಲ ತಿನಿಸು ಮಾಡುವುದರಲ್ಲಿ ಹೆಸರು ಗಳಿಸಿದ್ದವನು. ಅವನಿಗೂ ಬರಹೇಳಿದ. ಶಿವಣ್ಣ ಮತ್ತು ಗದಿಗೆಪ್ಪ ಬಂದ ಮೇಲೆ ದೇವಣ್ಣನ ಹೊಟೇಲನ್ನು ಹಿಡಿಯುವವರಿಲ್ಲ. ಎಲ್ಲವೂ ಈಗ ನೀರು ಕುಡಿದಷ್ಟು ಸಲೀಸು. ಅವ್ವ ಹೋದರೂ ಚಿಂತೆಯಿಲ್ಲ, ಮದುವೆ ಊಟದ ಕಾಂಟ್ರಾಕ್ಟ್ ಬಂದರೂ ಚಿಂತೆಯಿಲ್ಲ.

‘ಮುದುಕಿಗೆ ಚಾದಂಗಡಿ ಸಿಂವಿ ಹತ್ತೇತಿ ಕಾಣ್ತದ. ಅದಕ್ಕ ಮಲ್ಲೂರು ಬಿಟ್ಟು ಬರವಲ್ಲಳು.’ ಕಿರಿಯ ಸೊಸೆ ಅತ್ತೆಗೆ ದಿನಾಲು ಮಂಗಳಾರತಿ ಮಾಡುವವಳೆ. ಹಿರಿಯ ಮಗನ ಮನೆಯನ್ನು ಸುದ್ದು ಮಾಡುವುದರಲ್ಲಿಯೆ ಅವಳ ಜೀವನ ಕಳೆದಳು. ಅವನಿಗೆ ಹೆಣ್ಣು ನೋಡಲು ಆರು ವರ್ಷ ಕಳೆದಳು. ಅವನ ಹೊಟೇಲು ರಿಪೇರಿ ಮಾಡಲು ಮತ್ತೆ ಆರು ವರ್ಷ ಕಳೆದಳು. ಆಕೆ ಇಡೀ ಊರು ತುಂಬ ಆಡಿಕೊಂಡು ಅಡ್ಡಾಡಿದಳು.

‘ಸಣ್ಣ ಮಕ್ಕಳನ್ನು ನೋಡಿಕೊಳ್ಳುವವರು ಯಾರು? ದನಕರುಗಳಿಗೆ ಮೇವು ಹಾಕುವವರು ಯಾರು? ಎಮ್ಮೆ ಆಕಳುಗಳನ್ನು ಹಿಂಡುವವರು ಯಾರು? ಕೆಲಸ ಮಾಡುವುದು ಬೇಡ. ಆದರೆ ಮನೆಯಲ್ಲಿದ್ದು ದೇಖರೇಖಿಯಾದರೂ ಮಾಡಬೇಕಲ್ಲ’ ಕಿರಿಯ ಮಗ ಮತ್ತು ಸೊಸೆ ತಮ್ಮ ಆಪ್ತರ ಮುಂದೆ ಹೇಳಿದ್ದೇ ಹೇಳಿದ್ದು. ದೇವಣ್ಣನೂ ಹುಟ್ಟಿದೂರಿಗೆ ಬರುತ್ತೇನೆಂದು ಹೇಳಿದ್ದನಲ್ಲ? ಎಲ್ಲಿಗೆ ಹೋಯಿತು ಹುಟ್ಟಿದೂರಿನ ಪ್ರೀತಿ? ಬರೀ ಮಾತಿನ ಮಲ್ಲರು. ಮಲ್ಲೂರಿನಲ್ಲಿಯ ಹೊಲ ಮಾರಿದ ಮೇಲೆ ಸಿಂದೋಗಿಯಲ್ಲಿಯೆ ಒಂದಷ್ಟು ಜಮೀನು ಖರೀದಿ ಹಿಡಿಯುವುದಿದೆ ಎಂದಿದ್ದರು. ಅತ್ತೆ ದೊಡ್ಡದಾಗಿ ಎಲ್ಲರೆದುರು ಕೊಚ್ಚಿಕೊಂಡಿದ್ದರು. ದೇವಣ್ಣ ಯಾಕೆ ಬರಲಿಲ್ಲ? ಪ್ಲ್ಯಾನ್ ಬದಲಿ ಮಾಡಿದ್ದೇಕೆ? ಮಲ್ಲೂರಿಗೆ ಹೋಗಿ ಧಾಮ್‌ಧೂಮ್ ಆಗಿ ಹೊಟೇಲು ಸುರು ಮಾಡಿದರು. ಗಿಣಿಮೂಗಿನ ಗಿರಿಯಪ್ಪ ಹೇಳಿದನೆಂದು ಮಾಡಿದೆವು ಎನ್ನುತ್ತಾರೆ. ಅವನು ಬಾವಿಗೆ ಬೀಳು ಎಂದರೆ ಬೀಳುತ್ತಾರೆಯೆ? ಅವನು ಸಲಹೆ ಕೊಟ್ಟನೆ ಅಥವಾ ಅತ್ತೆ ಬಾವ ಆ ರೀತಿ ನಾಟಕ ಮಾಡುತ್ತಿದ್ದಾರೊ? ಮುದುಕಿಯ ಕಾರುಬಾರ ಅಷ್ಟುಇಷ್ಟೆಂದು ಹೇಳಲು ಬರುವುದಿಲ್ಲ. ಅಂತೂ ಏನೇನಲ್ಲ ಜರುಗುತ್ತಿದೆ ಜಗತ್ತಿನಲ್ಲಿ! ಅವರಿಗೂ ಸಿಟ್ಟು ಬಂದು ಮುದುಕಿಯನ್ನು ಕರೆದೊಯ್ಯಲು ಬಂದರು. ಕಿರಿಸೊಸೆ ಗಂಡನಿಗೆ ಕಟ್ಟುನಿಟ್ಟಾಗಿ ಹೇಳಿಯೇ ಕಳಿಸಿದ್ದಾಳೆ.

‘ನಿಮ್ಮ ಅವ್ವನ್ನ ಉಪಾಯದಿಂದ ಹೊಟೇಲ್ ಬಿಡಿಸಿ ಊರಿಗೆ ಕರಕೊಂಡು ಬಾ. ಆಕೀ ಜೋಡಿ ಜಗಳಕ್ಕ ನಿಲ್ಲಬ್ಯಾಡ. ನಮ್ಮ ಮನ್ಯಾಗಿನ ಅಡಚಣಿ ಆಕೀಗೆ ಹೇಳಬ್ಯಾಡ. ಆಕಿಗೆ ಮೊದಲೆ ಎಲ್ಲಾ ಹೇಳಿಬಿಟ್ರ ಆಕೀ ಬರಂಗಿಲ್ಲಂದ್ರ ಬರಂಗಿಲ್ಲ. ಈ ಕೆಲಸ ಬಾಳ ಚಾತುರ್ಯದಿಂದ ಮಾಡಬೇಕು. ನೋಡು, ಆ ದೊಡ್ಡಾಂವ ಹೊಟೇಲ್ ಇಟಗೊಂಡು ತಾನು ನೆರಳಿನ್ಯಾಗ ನಿಂತುಕೊಂಡು ರೊಕ್ಕ ಗಳಿಸ್ತಾನ. ನಾನು ಮತ್ತು ನೀನು ಇಲ್ಲಿ ಬಿಸಿಲ ಅನ್ನಂಗಿಲ್ಲ, ಮಳಿ ಅನ್ನಂಗಿಲ್ಲ ಹೊಲದಾಗ ದುಡೀಬೇಕು. ಮನಿ ನಡೆಸಬೇಕು. ಹಿರಿಯರ ಹೊಲ ಕಾಪಾಡಿಕೊಂಡು ಹೋಗಬೇಕು. ಅಂವೇನು ನಿಮ್ಮಣ್ಣ, ಬಾಳ ರೊಕ್ಕದ ಹರಕತ್ತು ಆಯಿತು ಅಂದ್ರ ಸ್ವಲ್ಪ ಹೊಲ ಮಾರ್ತಾನು, ಝುಳಾಝುಳಾ ರೊಕ್ಕ ಎಣಿಸ್ತಾನ. ನೀನು ಬರೇ ನಿಮ್ಮ ಅವ್ವ, ನಿಮ್ಮ ಅಣ್ಣ, ನಿಮ್ಮ ಹೊಲ ಅಂತ ದುಡಿದು ದುಡಿದು ಸಾಯಲಿಕ್ಕೆ ಹತ್ತೀ. ಹೂಂ, ಅದೆಲ್ಲ ಇರಲಿ, ಸುಮ್ಮನೆ ಮಾತಿಗೆ ಬಂದು ಹೇಳೇನಿ. ಹೋಗೋಮುಂದ ಇಳಕಲ್ಲ ಸೀರಿ ಮತ್ತು ಗುಳೇದಗುಡ್ಡದ ಕುಬಸದ ಕಣ ತಗೋಂಡು ಹೋಗು. ಮೊನ್ನೆ ಹಬ್ಬಕ್ಕ ತಂದಿದ್ದು ಅಂತ ಹೇಳು. ಆಮ್ಯಾಲ ಆಕಿ ಜೋಡಿ ಮೆತ್ತಗ ಮಾತಾಡು. ಜೋರು ಮಾಡೀದಿಯಂದ್ರ ಮುದುಕಿ ಎಂದಿಗೂ ಮಣಿಯೋದಿಲ್ಲ. ಆಕೀ ಇಲ್ಲದೆ ಊರು ನಡೀವಲ್ಲು. ಮೊಮ್ಮಕ್ಕಳು ಜೀಂವ ಬಿಡಲಿಕ್ಕೆ ಹತ್ಯಾರ ಅಂತ ಆಕೀಗೆ ಹೇಳು. ಅಂದ್ರ ಆಕಿ ಬರ್ತಾಳು. ಮತ್ತೆ ಮನ್ಯಾಗ ಕೆಲಸ ಐತಿ, ಎಮ್ಮಿ ಹಿಂಡೋದೈತಿ, ಅಡಿಗಿ ಮಾಡೋರು ಯಾರೂ ಇಲ್ಲ ನೀ ಖರೆಖರೆ ಹೇಳಿದೀ ಅಂದ್ರ ಅತ್ತಿ ಅಲ್ಲೇ ಹೊಟೇಲದಾಗ ಕುಂದ್ರತಾಳ. ನಾ ಹೇಳಿದ್ದು ನೆನಪಿರಲಿ. ಹುಷಾರು.’ ಆದರೆ ಅಷ್ಟೆಲ್ಲ ಹೇಳುವ ಪ್ರಮೇಯವೆ ಬರಲಿಲ್ಲ.

ಮುದುಕಿಗೆ ಇತ್ತೀಚೆಗೆ ಮಲ್ಲೂರು ಬೇಸರ ತರಿಸತೊಡಗಿತ್ತು. ದೇವಣ್ಣ ಊರೂರು ಅಲೆಯುವುದರಿಂದ ಒಬ್ಬಳೆ ಇರುವುದು ಆಕೆಗೂ ಬೇಜಾರಿನ ಸಂಗತಿ. ಮಗ ಸುಧಾರಿಸುವ ಹಾಗೆ ಕಾಣುವುದಿಲ್ಲ! ಪಾಪ, ಅನಸೂಯೆಯದು